## ಸಮಗ್ರ ಶಿಕ್ಷಣ – ಕರ್ನಾಟಕ

## ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು – 560 001

ಸಂಖ್ಯೆ: 14094DIRQ/A4/TALP/2021 ದಿನಾಂಕ: 04.02.2022

### ಸುತ್ತೋಲೆ

**ವಿಷಯ:** 6 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೆಸ್‌ಲೈನ್ ಸಮೀಕ್ಷೆ ಕೈಗೊಳ್ಳುವ ಕುರಿತು.

***********

ಸಮಗ್ರ ಶಿಕ್ಷಣ ಕರ್ನಾಟಕದಡಿಯಲ್ಲಿ 2022–23ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆ ಮತ್ತು ಆಯವ್ಯಯ ಸಿದ್ಧಪಡಿಸಬೇಕಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ಆಯ್ದ ಸರ್ಕಾರಿ ಶಾಲೆಗಳಲ್ಲಿನ 6 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಲ್ಲಿನ ಕಲಿಕಾ ಮಟ್ಟವನ್ನು ತಿಳಿದುಕೊಳ್ಳಲು ಬೇಸಲೈನ್ ಸಮೀಕ್ಷೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.

**ಸಮೀಕ್ಷೆಯ ವ್ಯಾಪ್ತಿ:**

- ರಾಜ್ಯದ ಒಟ್ಟು ಸರ್ಕಾರಿ ಶಾಲೆಗಳಲ್ಲಿ 6 ರಿಂದ 8ನೇ ತರಗತಿ ಹೊಂದಿರುವ ಶಾಲೆಗಳಲ್ಲಿ ಶೇ.10ರಷ್ಟು ಶಾಲೆಗಳಲ್ಲಿ ಸಮೀಕ್ಷೆಗೆ ರಾಜ್ಯ ಹಂತದಿಂದಲೇ ಶಾಲೆಗಳನ್ನು ಆಯ್ಕೆಮಾಡಿ ಜಿಲ್ಲೆಗಳಿಗೆ ನೀಡಲಾಗುವುದು.
- ಸಮೀಕ್ಷೆಗೆ ಆಯ್ಕೆಯಾದ ಶಾಲೆಗಳಲ್ಲಿನ 6 ರಿಂದ 8ನೇ ತರಗತಿಯಲ್ಲಿ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳನ್ನು ಸಮೀಕ್ಷೆಗೆ ಒಳಪಡಿಸುವುದು.

**ಸಮೀಕ್ಷೆಯ ವಿಧಾನ:**

ಸದರಿ ಸಮೀಕ್ಷೆಯನ್ನು ಪ್ರಥಮ್ ಪ್ರತಿಷ್ಠಾನದ ಸಹಯೋಗದಲ್ಲಿ ಕೈಗೊಳ್ಳಲಾಗುತ್ತದೆ. ಸಮೀಕ್ಷೆಗಾಗಿ ಮೌಲ್ಯಾಂಕನ ಸಾಧನವನ್ನು ಸಿದ್ಧಪಡಿಸಲಾಗಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಸಮೀಕ್ಷೆಗಾಗಿ ಆಯ್ಕೆಯಾದ ಶಾಲೆಗಳಿಗೆ ನೇರವಾಗಿ ತಲುಪಿಸಲಾಗುವುದು. ಸಮೀಕ್ಷೆಯನ್ನು ವೆಬ್ ಅಪ್ಲಿಕೇಶನ್ ಮೂಲಕ ಕೈಗೊಳ್ಳಲು ನಿರ್ಧರಿಸಲಾಗಿದೆ. ಈ ಸಂಬಂಧ ದಿನಾಂಕ:09.02.2022ರಂದು ಟೆಲಿಕಾನ್ಫರೆನ್ಸ್ ಮೂಲಕ ಒಂದು ದಿನದ ತರಬೇತಿಯನ್ನು ಆಯೋಜಿಸಿ ಸಂಪೂರ್ಣ ವಿವರವನ್ನು ನೀಡಲಾಗುವುದು.

**ಸಮೀಕ್ಷೆಯ ದಿನಾಂಕ:**

ಸಮೀಕ್ಷೆಯನ್ನು ದಿನಾಂಕ:15.02.2022 ರಿಂದ 17.02.2022ರವರೆಗೆ ಕೈಗೊಳ್ಳಲಾಗುವುದು. ಸದರಿ ದಿನಗಳಂದು ಶಾಲಾ ಅವಧಿಯಲ್ಲಿಯೇ ಸಮೀಕ್ಷೆಯನ್ನು ಕೈಗೊಳ್ಳುವುದು.

**ಉಪನಿರ್ದೇಶಕರು(ಅಭಿವೃದ್ಧಿ)ರವರ ಕಾರ್ಯಗಳು:**

- ಜಿಲ್ಲಾ ಉಪನಿರ್ದೇಶಕರು(ಅಭಿವೃದ್ಧಿ)ರವರು ಸದರಿ ಸಮೀಕ್ಷೆಯ ಜಿಲ್ಲಾ ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವುದು.
- ಸಮೀಕ್ಷೆಗೆ ಆಯ್ಕೆಯಾದ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವ ಶಿಕ್ಷಕರನ್ನು ಆಯ್ಕೆ ಮಾಡುವುದು ಮತ್ತು ಶಾಲೆಗಳನ್ನು ಹಂಚಿಕೆ ಮಾಡುವುದು.
- ಸಮೀಕ್ಷಾದಾರರಾಗಿ ಆಯ್ಕೆಯಾದ ಶಿಕ್ಷಕರು ದಿನಾಂಕ:09.02.2022ರಂದು ನಡೆಯುವ ತರಬೇತಿಗೆ ಕಡ್ಡಾಯವಾಗಿ ಹಾಜರಾಗುವಂತೆ ನೋಡಿಕೊಳ್ಳುವುದು.
- ಸಮೀಕ್ಷೆಗಾಗಿ ಸಿದ್ಧಪಡಿಸಿರುವ ಮುದ್ರಿತ ಮೌಲ್ಯಾಂಕನ ಸಾಮಗ್ರಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನೇರವಾಗಿ ಸರಬರಾಜು ಮಾಡಲಾಗುತ್ತಿದ್ದು, ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಸಮನ್ವಯದಿಂದ ಸದರಿ ಸಾಮಗ್ರಿಯು ನಿಗದಿತ ಸಮಯದೊಳಗೆ ಆಯ್ಕೆಯಾದ ಶಾಲೆಗಳಿಗೆ ತಲುಪುವಂತೆ ಖಚಿತಪಡಿಸಿಕೊಳ್ಳುವುದು.
- ಸಮೀಕ್ಷೆಯ ಮೇಲ್ವಿಚಾರಣೆಗಾಗಿ ಡಯಟ್‌ನ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರನ್ನು ನೇಮಿಸುವುದು.
- ಸಮೀಕ್ಷೆಯ ದಿನದಂದು ಆಯ್ಕೆಯಾದ ಶಿಕ್ಷಕರು ಅವರಿಗೆ ವಹಿಸಲಾದ ಶಾಲೆಗಳಿಗೆ ತೆರಳಿ ಸಮೀಕ್ಷೆ ಕೈಗೊಳ್ಳುವಂತೆ ನೋಡಿಕೊಳ್ಳುವುದು.

**ಉಪನಿರ್ದೇಶಕರು(ಆಡಳಿತ)ರವರ ಕಾರ್ಯಗಳು:**

- ಉಪನಿರ್ದೇಶಕರು(ಅಭಿವೃದ್ಧಿ)ರವರೊಂದಿಗೆ ಸಮನ್ವಯದೊಂದಿಗೆ ಸಮೀಕ್ಷೆ ಕೈಗೊಳ್ಳುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ಆಯೋಜಿಸಿ, ಸಮೀಕ್ಷೆಯ ಸಂಪೂರ್ಣ ವಿವರ ನೀಡುವುದು.
- ಸಮೀಕ್ಷಾದಾರರಾಗಿ ಆಯ್ಕೆಯಾದ ಶಿಕ್ಷಕರು ಕಡ್ಡಾಯವಾಗಿ ಅವರಿಗೆ ವಹಿಸಲಾದ ಶಾಲೆಗಳಿಗೆ ಹಾಜರಾಗಿ ಸಮೀಕ್ಷೆಯನ್ನು ಕೈಗೊಳ್ಳುವಂತೆ ಸೂಚನೆ ನೀಡುವುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಗಳು:**

- ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಲಾಕ್ ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವುದು.
- ಸಮೀಕ್ಷೆಗಿಂತ ಮುಂಚೆ ಸರಬರಾಜು ಮಾಡಲಾಗುವ ಮುದ್ರಿತ ಮೌಲ್ಯಾಂಕನ ಸಾಮಗ್ರಿಗಳನ್ನು ಸುರಕ್ಷಿತವಾಗಿ ಇರಿಸಿಕೊಳ್ಳುವುದು.
- ಸಮೀಕ್ಷೆಯ ಹಿಂದಿನ ದಿನ ಆಯ್ಕೆಯಾದ ಶಾಲೆಗಳ ಮುಖ್ಯ ಶಿಕ್ಷಕರ ಸಭೆ ಆಯೋಜಿಸಿ. ಸಮೀಕ್ಷೆಯ ವಿವರ ನೀಡುವುದು.
- ಆಯ್ಕೆಯಾದ ಶಾಲೆಗಳಿಗೆ ಸಮೀಕ್ಷೆಯ ಹಿಂದಿನ ದಿನ ಸಂಬಂಧಿಸಿದ ಸಮೂಹ ಸಂಪನ್ಮೂಲ ವ್ಯಕ್ತಿಗಳ ಮೂಲಕ ಮೌಲ್ಯಾಂಕನ ಸಾಮಗ್ರಿಗಳನ್ನು ತಲುಪಿಸುವುದು.
- ಸಮೀಕ್ಷಾ ಕಾರ್ಯದ ನಂತರ ಉತ್ತರಿಸಿದ, ಬಳಸದ ಮೌಲ್ಯಾಂಕನ ಸಾಮಗ್ರಿಗಳನ್ನು ಅದೇ ಶಾಲೆಯಲ್ಲಿ ಮುಂದಿನ ಆದೇಶದವರೆಗೆ ಸಂಗ್ರಹಿಸಿ ಇಡುವುದು.

**ಸಮೀಕ್ಷಾದಾರರಾಗಿ ಆಯ್ಕೆಯಾದ ಶಿಕ್ಷಕರ ಕಾರ್ಯಗಳು:**

- ದಿನಾಂಕ:09.02.2022ರಂದು ಆಯೋಜಿಸುವ ತರಬೇತಿಗೆ ಕಡ್ಡಾಯವಾಗಿ ಹಾಜರಾಗುವುದು.
- ಸಮೀಕ್ಷೆಯ ದಿನದಂದು ತಮಗೆ ವಹಿಸಲಾದ ಶಾಲೆಗಳಿಗೆ ನಿಗದಿತ ಸಮಯದಲ್ಲಿ ಹಾಜರಾಗುವುದು.
- ತರಬೇತಿಯಲ್ಲಿ ನೀಡಲಾದ ಸೂಚನೆಗಳಂತೆ ಸಮೀಕ್ಷೆಯನ್ನು ಕೈಗೊಳ್ಳುವುದು.

ಮಕ್ಕಳ ಕಲಿಕಾ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮ ರೂಪಿಸುವ ಹಿನ್ನೆಲೆಯಲ್ಲಿ ಸದರಿ ಸಮೀಕ್ಷೆಯು ಪ್ರಮುಖ ಪಾತ್ರವಹಿಸಲಿದ್ದು, ಎಲ್ಲಾ ಅಧಿಕಾರಿಗಳು, ಶಿಕ್ಷಕರು ನಿಗದಿತ ಸಮಯದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಸಮೀಕ್ಷೆಯನ್ನು ಕೈಗೊಳ್ಳುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಅಗತ್ಯ ಕ್ರಮಕ್ಕಾಗಿ:

1. ಎಲ್ಲಾ ಜಿಲ್ಲೆಯ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
2. ಎಲ್ಲಾ ಜಿಲ್ಲೆಯ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
3. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ.
4. ಸಮೀಕ್ಷೆಗೆ ಆಯ್ಕೆಯಾದ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಮೂಲಕ.
5. ಕಛೇರಿ ಪ್ರತಿ.